**ಸಾಕ್ಷಿಯನ್ನು ದಿನಾಂಕ *09.09.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಈ ಹಿಂದೆ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿದ್ದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು, ಚೇತನ್ ಮತ್ತು ಗೌತಮ್ ನ್ಯಾಯಾಲಯದ ಮುಂದೆ ಮಾತನಾಡುತ್ತ ನಿಂತಿದ್ದೆವು ಎಂದರೆ ಸರಿ. ನಾವುಗಳು ಸ್ನೇಹಿತರು ಇರುತ್ತೇವೆ ಎಂದರೆ ಸರಿಯಲ್ಲ. ಪರಿಚಯಸ್ಥರು ಇರುತ್ತೇವೆ. ಪೊಲೀಸರ ಜೊತೆ ನಾವು ಈ ದಿನ ಮಾತನಾಡುತ್ತಾ ನಿಂತಿದ್ದೆವು ಎಂದರೆ ಬಂದಿರುತ್ತೀರಾ ಎಂದು ಕೇಳಿದರು ಬಂದಿರುತ್ತೇವೆ ಎಂದು ಹೇಳಿದ್ದೆ. ಕೇಸಿನ ವಿದ್ಯಾಮಾನಗಳ ಬಗ್ಗೆ ಪೊಲೀಸರು ನನ್ನ ಮತ್ತು ಚೇತನ್ ಅವರ ಜೊತೆ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಪೊಲೀಸರು ನನಗೆ ಲಿಖಿತ ನೊಟೀಸ್ ಅನ್ನು ಕೊಟ್ಟಿದ್ದರು. ಆ ದಿನ ಪೊಲೀಸರು ನನಗೆ ಮತ್ತು ನಂಜುಂಡಸ್ವಾಮಿ ಅವರಿಗೆ ನೊಟೀಸ್ ಕೊಟ್ಟಿದ್ದರು. ನಂಜುಂಡಸ್ವಾಮಿ ನನ್ನ ಸ್ನೇಹಿತ. ಪೊಲೀಸರು ನಮ್ಮನ್ನು ಕಟ್ಟಡದ ಹತ್ತಿರ ಕರೆದುಕೊಂಡು ಹೋಗಿದ್ದರು ಅಲ್ಲಿ ಆರೋಪಿತನು ಚಾಕು ವನ್ನು ತೋರಿಸಿದ್ದ ಆ ಚಾಕುವನ್ನು ಪೊಲೀಸರು ತೆಗೆದುಕೊಂಡಿದ್ದರು. ಚಾಕು ನೇ ಬೇರೆ , ಡ್ರಾಗನ್ ಬೇರೆ ಮತ್ತು ಚೂರಿ ಬೇರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಚಾಕು ಎಷ್ಟು ಉದ್ದ ಮತ್ತು ಅಗಲ ಇತ್ತು ಎಂದು ಹೇಳಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಮತ್ತು ನಂಜುಂಡಸ್ವಾಮಿ ಘಟನಾ ಸ್ಥಳಕ್ಕೆ ಎಷ್ಟು ಗಂಟೆಗೆ ಹೋಗಿದ್ದೆವು ಎಂದು

ಹೇಳಿರುವುದಿಲ್ಲ ಎಂದರೆ ಸರಿ. ಆ ದಿನ ಚಾಕು ಮೆಟಲ್ ದು ಇದ್ದು 4 ಇಂಚು ಉದ್ದ ಇತ್ತು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಈ ಬಗ್ಗೆ ಹೇಳಿರುತ್ತೇನೆ. ನಾನು ಹೋಗಿದ್ದೆ ಅಂತ ಹೇಳುವ ಕಟ್ಟಡದ ಹತ್ತಿರದ ಜಾಗದ ಚೆಕ್ಕುಬಂಧಿ ಹೇಳಲು ಬರುತ್ತದೆ ಪೂರ್ವಕ್ಕೆ ಕಟ್ಟುತ್ತಿರುವ ಕಟ್ಟಡ, ಪಶ್ಚಿಮಕ್ಕೆ ರಸ್ತೆ, ಉತ್ತರ ಮತ್ತು ದಕ್ಷಿಣಕ್ಕೆ ನನಗೆ ಹೇಳಲು ಆಗುವುದಿಲ್ಲ ಏಕೆಂದರೆ ಉತ್ತರ ಮತ್ತು ದಕ್ಷಿಣಕ್ಕೆ ಕಟ್ಟಡ ಇದ್ದು ಅವುಗಳ ಮಾಲೀಕರ ಹೆಸರು ಗೊತ್ತಿರುವುದಿಲ್ಲ. ಪೊಲೀಸರು ಷರ್ಟ್ ಅನ್ನು ವಶಪಡಿಸಿಕೊಂಡರು ಆದಾದ ನಂತರ ನಾನು ಸಹಿ ಮಾಡಿ ಮನೆಗೆ ಹೋಗಿದ್ದೆ. ಆ ದಿನ ನೋಡಿದ್ದ ಷರ್ಟು ಕ್ರೀಂ ಕಲರ್ ಬ್ಲೂ ಮತ್ತು ರೆಡ್ ಮಿಕ್ಸ್ ಇತ್ತು ಪೂಮ ಕಂಪನಿಯ ಟೀ ಷರ್ಟು ಇತ್ತು. ಟೀ ಷರ್ಟ್ ಚಂದನ್ ಅವರ ಮನೆಯವರ ಕಡೆ ಇತ್ತು ಅದನ್ನು ಪೊಲೀಸರಿಗೆ ಕೊಟ್ಟಿದ್ದರು. ಟೀ ಷರ್ಟ್ ಮತ್ತು ಷರ್ಟಿಗೆ ವ್ಯತ್ಯಸ ಇರುತ್ತದೆ ಎಂದರೆ ಸರಿ. ಚಂದನ್ ಅವರ ಮನೆಯ ಹತ್ತಿರ ಆ ಷರ್ಟ್ ಅನ್ನು ಕೊಟ್ಟಿದ್ದರು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಎಷ್ಟು ಜನ ಇದ್ದರು, ಚಂದನ್ ಮನೆಯವರು ಎಷ್ಟು ಜನ ಇದ್ದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಷರ್ಟ್ ಅನ್ನಾಗಲೀ ಮತ್ತು ಚಾಕುವನ್ನಾಗಲೀ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಚಂದನ್ ಮತ್ತು ಚೇತನ್ ಸ್ನೇಹಿತರು ಇರುವುದರಿಂದ ಕೇಸಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಷರ್ಟು ಎಡ ಬುಜದ ಮೇಲೆ ತೂತಆಗಿತ್ತು ನಾನು ಈ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಷರ್ಟಿಗೆ ಎಷ್ಟು ಕಡೆ ತೂತ ಆಗಿರುತ್ತದೆ

ಎಂದು ಹೇಳಿರುವುದಿಲ್ಲ. ಷರ್ಟು ಮತ್ತು ಚಾಕುವನ್ನು ಪೊಲೀಸರು ಮತ್ತು ಚಂದನ್, ಚೇತನ್ ಸೇರಿ ಸೃಷ್ಟಿಮಾಡಿಕೊಂಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**